

# ಮುಟ್ಟು ನಿಂತ ಮೇಲೆ...

**ಮಹಿಳೆಯರಿಗೆ ಮುಟ್ಟು ನಿಂತ ಬಳಿಕವೂ ಸಮಸ್ಯೆಗಳಿಗೆ ಮುಕ್ತಿ ಸಿಗುವುದಿಲ್ಲ. ಋತುಬಂಧದ ನಂತರ ಉಂಟಾಗುವ ರಕ್ತಸ್ರಾವ ಅತ್ಯಂತ ಅಸಹಜವಾದದ್ದು. ಗರ್ಭಕೋಶದ ಒಳಪದರ ತೆಳುವಾಗುವುದು, ಗರ್ಭಾಶಯದೊಳಗೆ ಅಸಹಜ ಜೀವಕೋಶಗಳ ಬೆಳವಣಿಗೆ, ಗರ್ಭಕೋಶದೊಳಗೆ ಸೋಂಕು ಮುಂತಾದವು ಇದಕ್ಕೆ ಕಾರಣ. ಕೆಲಸಂದರ್ಭದಲ್ಲಿ ಇದು ಗರ್ಭಕೋಶದ ಕ್ಯಾನ್ಸರ್ ಇದ್ದರೂ ಇರಬಹುದು. ಮುಟ್ಟು ನಿಂತು ಹದಿಮೂರು ವರ್ಷಗಳ ಬಳಿಕ ಅತಿರಕ್ತಸ್ರಾವ ಉಂಟಾಗಿ ಅನುಭವಿಸಿದ ದೈಹಿಕ ನೋವು, ತಲ್ಲಣಗಳ ಸ್ವಾನುಭವವನ್ನು ಲೇಖಕಿ ಇಲ್ಲಿ ದಾಖಲಿಸಿದ್ದು, ಋತುಬಂಧದ ಹಂತ ತಲುಪಿದ ಎಲ್ಲ ಮಹಿಳೆಯರು ಈ ಕುರಿತ ಅರಿವು ಬೆಳೆಸಿಕೊಳ್ಳಬೇಕಾದ ಅಗತ್ಯವನ್ನು ಒತ್ತಿಹೇಳುವಂತಿದೆ.**

■ ನೇಮಿಚಂದ್ರ

ಜುಲೈ, 7, 2023ರ ಶುಕ್ರವಾರ ಬೆಳಗ್ಗೆ ಎದ್ದಾಗ ಏಕೋ ಮನಸ್ಸು ಇರುಸು ಮುರುಸು, ರಾತ್ರಿ ಸರಿಯಾಗಿ ನಿದ್ರೆ ಬಂದಿರಲಿಲ್ಲ. ಅದಕ್ಕೆ ಯಾವ ಕಾರಣವೂ ಕಂಡಿರಲಿಲ್ಲ. ಎದ್ದು ಬಚ್ಚಲಿಗೆ ಹೋದೆ, ರಕ್ತಸ್ರಾವ! ಎದೆ ಬಡಿದುಕೊಂಡಿತು, ಕಾರಣ ನನಗೆ ಮುಟ್ಟು ನಿಂತು 13 ವರ್ಷಗಳಾಗಿದ್ದವು.

ನಿಜ ಹೆಚ್ಚೇನೂ ಇರಲಿಲ್ಲ, ಆದರೆ ಮುಟ್ಟು ನಿಂತ ಮೇಲಿನ ಇಂತಹ ಪ್ರಕರಣಕ್ಕೆ ಗಂಭೀರ ಕಾರಣಗಳು ಇರಬಲ್ಲವು. ತಕ್ಷಣ ಡಾ. ನಳಿನಿ (ಹೆಸರು ಬದಲಿಸಿದೆ) ಅವರ ಕ್ಲಿನಿಕ್‌ಗೆ ಓಡಿದೆ. ಈ ದಿನ ಕ್ಲಿನಿಕ್‌ನಲ್ಲಿ ಡಾ. ನಳಿನಿ ಇರಲಿಲ್ಲ. ಸೋಮವಾರ ಸಿಗಲಿದ್ದರು.

ನಾನು ಪರಾಮರ್ಶಿಸಿದ ಸಂಶೋಧನಾ ಲೇಖನಗಳು 'ಮುಟ್ಟು ನಿಂತ ಮೇಲಿನ ರಕ್ತಸ್ರಾವ ಅಸಹಜವಾದದ್ದು' ಎಂದು ಒತ್ತಿ ಹೇಳಿದವು. ಇಸವಿ 2018ರಲ್ಲಿ ಪ್ರಕಟವಾದ ಮೇರಿಲ್ಯಾಂಡ್‌ನ 'ನ್ಯಾಷನಲ್ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್'ನ ಡಾ. ಮೆಗನ್ ಎ. ಕ್ಲಾರ್ಕ್ ಮತ್ತು ಆರು ಜನ ತಜ್ಞರು, 40790 ಮಹಿಳೆಯರ ವೈದ್ಯಕೀಯ ಮಾಹಿತಿಯನ್ನು ವಿಶ್ಲೇಷಿಸಿ ಬರೆದ ಸಂಶೋಧನಾ ಲೇಖನ 'ಎಂಡೊಮೆಟ್ರಿಯಲ್ ಕ್ಯಾನ್ಸರ್ ಇರುವ ಶೇ.90ರಷ್ಟು ಮಹಿಳೆಯರಲ್ಲಿ ಮುಟ್ಟು ನಿಂತ ಮೇಲೆ ರಕ್ತಸ್ರಾವ ಕಾಣಿಸಿಕೊಂಡಿತ್ತು' ಎಂದಿತ್ತು. 'ಎಂಡೊಮೆಟ್ರಿಯಲ್ ಕ್ಯಾನ್ಸರ್' ಎಂದರೆ ಗರ್ಭಕೋಶದ ಒಳಪದರಿನ ಕ್ಯಾನ್ಸರ್.

ಮಿಯಾಮಿ ವಿಶ್ವವಿದ್ಯಾಲಯದ 'ಗೈನಕಾಲಜಿಕ್ ಸರ್ಜರಿ' ವಿಭಾಗದ ನಿರ್ದೇಶಕರಾದ ಡಾ. ಜೆ. ಕರುಗ್ನೋ ಅವರ ಮತ್ತೊಂದು ಸಂಶೋಧನಾ ಲೇಖನ ಮುಟ್ಟು ನಿಂತ ಮಹಿಳೆಯರಲ್ಲಿ ಈ ರೀತಿಯ ರಕ್ತಸ್ರಾವಕ್ಕೆ ಶೇ. 10ರಷ್ಟು ಕಾರಣ 'ಎಂಡೊಮೆಟ್ರಿಯಲ್ ಕ್ಯಾನ್ಸರ್' ಎಂದಿತ್ತು.